**<u>ಅಸಲು ದಾವಾ ಸಂಖ್ಯೆ: -17/2019</u>** **ಪಿ.ಡಬ್ಲ್ಯೂ:-1**

ದಿನಾಂಕಃ **08-01-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು :- 1 ನೇ ಪ್ರತಿವಾದಿ ಪರ ವಕೀಲರಿಂದ :-</u>**

3 ನೇ ವಾದಿ ನನ್ನ ತಾಯಿ. 2 ನೇ ವಾದಿ ನನ್ನ ತಮ್ಮ. 4 ಮತ್ತು 5 ನೇ ವಾದಿಗಳು ನನ್ನ ಅಕ್ಕಂದಿರು. 1 ರಿಂದ 3 ನೇ ಪ್ರತಿವಾದಿಗಳು ನಮ್ಮ ಚಿಕ್ಕಪ್ಪಂದಿರು. 4 ನೇ ಪ್ರತಿವಾದಿ ನನ್ನ ಅತ್ತೆ. 5 ನೇ ಪ್ರತಿವಾದಿ ನನ್ನ ತಂಗಿ. ನನ್ನ ತಂದೆಯ ಹೆಸರು. ಹೆಚ್ ಎಸ್ ಶಫೀ. ಪ್ರತಿವಾದಿ 1 ರಿಂದ 3 ರವರ ತಂದೆಯ ಹೆಸರು ಸೈಯದ್ ಅಹಮದ್ ಸಾಬ್. ಸೈಯದ್ ಅಹಮದ್ ಸಾಬ್ ರವರಿಗೆ ಇಬ್ಬರು ಹೆಂಡತಿಯರು ಅಂದರೆ ಅಮೀರ್ ಬೀ ಮತ್ತು ಫಾತೀಮಾ ಬೀ. ಅಮೀರ್ ಬೀ ರವರಿಗೆ ಇಬ್ಬರು ಮಕ್ಕಳು ಅಂದರೆ ನನ್ನ ತಂದೆ ಮತ್ತು ಪ್ಯಾರೀಜಾನ್. ಫಾತೀಮಾ ಬೀ ರವರಿಗೆ 4 ಜನ ಮಕ್ಕಳು ಅಂದರೆ ಸೈಯದ್ ಮೊಹದ್ದೀನ್, ಜೀನತ್ ಬೀ, ಸೈಯದ್ ಜಮೀರ್, ಸೈಯದ್ ನಿಜಾಂ. ನಾನು, ವಾದಿ 2 ರಿಂದ 5 ಮತ್ತು ಪ್ರತಿವಾದಿ 1 ರಿಂದ 5 ರವರು ಕುಟುಂಬದ ಸದಸ್ಯರು ಎಂದು ತೋರಿಸಲು ವಂಶವೃಕ್ಷವನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ನಮ್ಮ ಅಜ್ಜಿ ಅಮೀರ್ ಬೀ ರವರು 1981 ನೇ ಸಾಲಿನಲ್ಲಿ ಮರಣಹೊಂದಿರುತ್ತಾರೆ. ನಮ್ಮ ಅಜ್ಜಿ ಅಮೀರ್ ಬೀ ರವರು ಮರಣಹೊಂದಿರುವ ಸಮಯದಲ್ಲಿ ಸಾಸ್ವೇಹಳ್ಳಿ ಗ್ರಾಮದಲ್ಲಿ ನಮ್ಮ ಅಜ್ಜನ ಜೊತೆಯಲ್ಲಿ ಇದ್ದರು.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.